ಹೋಗುವಾಗಲಂತೂ ಪಯಣ ದುರ್ಭರ. ಕಡೆಗೂ ಮಣ್ಣು ಸಿಗುವುದಿಲ್ಲ. ಪ್ರಿಯರಾದವನ್ನು ಮಣ್ಣಲ್ಲಿಡುವ ದೃಶ್ಯ ನೋಡಲಾಗದೇ ಹೋಗಿದ್ದು ಒಳಿತೇ ಆಯಿತು. ಹೋದವರ್ಷ ಇರಬೇಕು: ಹಸೀ ಬಾಣಂತಿಯನ್ನೂ ಏಳು ತಿಂಗಳಿಗೆ ಹುಟ್ಟಿದ ಕೂಸನ್ನೂ ಡಿಸ್‌ಚಾರ್ಜ್ ಮಾಡಿಕೊಂಡು ಕುಟುಂಬವೊಂದು ಹೊರಟಿತ್ತು ದುಗುಡವೇ ದಿಬ್ಬಣ ತೆಗೆದಂತೆ. ಬಾಣಂತಿ ತಲೆಗೆ ಬಟ್ಟೆಕಟ್ಟಿಕೊಂಡು ರೈಲಿನ ಕಿಟಕಿ ಹೊರಗೆ ದಿಟ್ಟಿ ನೆಟ್ಟಿದ್ದಳು. ಚೊಂಬು ತಟ್ಟೆ ರಗ್ಗು ತುಂಬಿದ ಬ್ಯಾಗು ಕಾಲಬಳಿ ಅನಾಥನಂತಿತ್ತು. ಕೂಸನ್ನು ಶಾಖಾಗಾರದಲ್ಲಿಟ್ಟರೂ ಪ್ರಯೋಜನ ಆಗಿರಲಿಲ್ಲ. ಗರ್ಭದೊಳಗಿದ್ದು ಸತ್ವ ಪಡೆಯಬೇಕಾದ ಅದು ಗಾಳಿಹೊಡೆತಕ್ಕೆ ಬಿದ್ದ ಈಚುಗಾಯಾಗಿತ್ತು; ಹೋಗಿದ್ದರೇ ಆರಾಮಿತ್ತು ಎಂಬ ಭಾವ ಹುಟ್ಟಿಸಿ ಅಜ್ಜಿಯ ಮಡಿಲಲ್ಲಿ ಮಲಗಿತ್ತು. ಸಂಕಟವನ್ನು ಚೂರುಚೂರೇ ಹೊರತೆಗೆದು ಆಸುಪಾಸಿದ್ದ ಹೆಂಗಸರೊಟ್ಟಿಗೆ ಗುಸುಗುಸು ಹಂಚಿಕೊಳ್ಳುತ್ತಿದ್ದ ಆಕೆ, ಮಡಿಲಲ್ಲಿದ್ದ ಸೌತೆಕಾಯಿ ಗಾತ್ರವನ್ನು ತೋರಿಸಿದಳು. ಕೋತಿಮರಿಯಂತಿದ್ದ ಅರೆಬೆಳೆದ ಭ್ರೂಣ. ಹೆಂಗಸರಿಂದ ಹಾ ಉದ್ಗಾರವೂ ಕಣ್ಣೀರೂ ಚಿಮ್ಮಿದವು. ಹತಾಶೆಯ ಠಸ್ಸೆಯೊತ್ತಿಸಿಕೊಂಡು ಕೂತಿದ್ದ ಮಗುವಿನ ಅಪ್ಪ, ‘ಮಂದಿಗೆ ತೋರಿಸಬ್ಯಾಡತ್ತೇ’ ಎಂದನು. ಮಗು ಸೆರಗಿನೊಳಗೆ ಮರೆಯಾಯಿತು. ದುಃಖ ಹಂಚಿಕೊಂಡರೆ ಕಮ್ಮಿಯಾಗುತ್ತದೆ. ಆದರೆ ಅದು ಹುಟ್ಟಿಸುವ ಅನುಕಂಪ ಮುಳ್ಳಾಗಿ ಚುಚ್ಚುತ್ತದೆ.

ಮಣಿಪಾಲದ ಬಸ್ಸುಗಳಲ್ಲಿ ಇಂತಹ ದಿಬ್ಬಣ ಕಡ್ಡಾಯ. ಹೋದ ವರ್ಷವಿರಬೇಕು, ಉಡುಪಿಯಿಂದ ಬರುತ್ತಿದ್ದೆ. ಕೊಟ್ಟೂರು ಕಡೆಯ ಗುಂಪೊಂದು ಮಣಿಪಾಲದಲ್ಲಿ ಏರಿತು. ರೋಗಿಯ ದರ್ಶನಕ್ಕೆ ಬಂದಿದ್ದ ಅದು, ದಿಕ್ಕೆಟ್ಟ ದನಿಯಲ್ಲಿ ನಡುರಾತ್ರಿ ತನಕ ಮಾತಾಡುತ್ತಿತ್ತು: “ಪ್ರಾಯದ ಹುಡುಗ. ಸತ್ತಂಗಲ್ಲ ಬದುಕದಂಗಲ್ಲ. ರೊಕ್ಕ ನೀರನಂಗ ಹೋಗ್ತದವ. ಜೀವ ಉಳಿಯೊ ಖಾತ್ರಿಯಿಲ್ಲ. ಹೋದ ವರ್ಷ ಲಗ್ನವಾಗಿದೆ. ಹುಡುಗನ ಐಬು ಗೊತ್ತಿದ್ದೂ ಒಬ್ಬ ಹೆಣಮಗಳ ಬಾಳು ಹಾಳು ಮಾಡಿದೆವು. ಆಕೆ ಉಸ್ ಅಂದರೆ ನಮಗೆ ತಟ್ಟುತ್ತದೆ. ದೇವರಿಟ್ಟಂಗಾಗಲಿ”– ಇತ್ಯಾದಿ. ನಿದ್ದೆಗೆಟ್ಟು ಸುಸ್ತಾಗಿದ್ದ ಗುಂಪು ಬೇಗನೆ ನಿದ್ದೆಗೆ ಸಂದಿತು. ನನ್ನ ನಿದ್ದೆ ಕದಡಿಹೋಯಿತು. ಯಾರಿಗೂ ತ್ರಾಸಕೊಡದ ಮರಣ ಬರಲಿ ಎಂದು ಧೇನಿಸಿದೆ. ನಿದ್ದೆ ಬಂದಿತು.

ಕಾಣುವ ಕಣ್ಣು ಕೇಳುವ ಕಿವಿ ತೆರೆದಿಟ್ಟುಕೊಂಡರೆ ಪಯಣ ಬೇಸರ ಹುಟ್ಟಿಸದು. ಜಾತ್ರೆಗೊ ಲಗ್ನಕ್ಕೊ ಪ್ರವಾಸಕ್ಕೊ ಹೊರಟವರಿದ್ದರೆ, ವಾಹನ ಜೀವಂತಿಕೆಯಿಂದ ತುಳುಕಾಡುತ್ತದೆ. ಹಳ್ಳಿಗಳಿಗೆ ಹೋಗುವ ಟಂಟಂಗಳಲ್ಲಿ ಇದಿನ್ನೂ ಹೆಚ್ಚು. ಅಲ್ಲಿ ಸೀಟುಹಿಡಿವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಡ್ರೈವರ್ ಹತ್ತಾಳಿನ ಜಾಗದಲ್ಲಿ ಇಪ್ಪತ್ತಾಳನ್ನು ಕೈಕಾಲು ಮುರಿದು, ಚೀಲದಲ್ಲಿ ಕಾಯಿಪಲ್ಲೆಯಂತೆ ತುಂಬಿಸುವನು. ಇಕ್ಕಟ್ಟು ಸೆಕೆಗಳಿಂದ ಬೆಂಡಾದ ಜನ, ಚಾರ್ಜು ವಸೂಲಿಗೆ ಬರುವವನ ತಾಪ ತೀರಿಸಿಕೊಳ್ಳುವರು. ತರಲೆ ಜನರಿಂದ ವಸೂಲಿ ಮಾಡಿ ಅವನೂ ಕಿಲಾಡಿಯಾಗಿರುತ್ತಾನೆ. ಸಂತೆಗೆ ಹೋಗಿದ್ದ ಹೆಂಗಸರು ಎಳೇ ನಿಂಬೆಕಾಯಿಯಂತಿದ್ದ ಕಂಡಕ್ಟರನನ್ನು ಗೋಳು ಹಾಕಿಕೊಂಡ ಪರಿ ಹೀಗಿತ್ತು:

“ಬಡಬಡ ರೊಕ್ಕ ತಗೀರಿ.” “ಮುಂದ ಕೊಡ್ತೇನಿರ. ನಾವೇನು ಓಡಿಹೋಗಂಗಿಲ್ಲ.” “ಮುಂದಂದ್ರ?” “ನಿನ್ನ ಲಗ್ನಕ್ಕಲೇ ಭಾಡ್ಯಾ.” “ಏ ಭಾಡ್ಯಾಗೀಡ್ಯಾ ಅಂದರ ಸುಮ್ಮನಿರಂಗಿಲ್ಲ ನೋಡ್ರಿ, ರೊಕ್ಕಬಿಚ್ಚೀ ಮದಲ, ಮಾಲಕಗ ಲೆಕ್ಕಕೊಡಬೇಕು.” “ಕೊಡಂಗಿಲ್ಲಲೇ, ಏನಮಾಡ್ತಿ? ಕೈಕಾಲು ಆಡದಂಗ ಮಂದೀನ ತುಂಬಿ ರೊಕ್ಕಡು ಅಂತಿ?” “ಸಣ್ಣವನಂತ ಚಾಷ್ಟಿ ಮಾಡಬ್ಯಾಡರಿ.” “ಹ್ಞೂ ಸಣ್ಣವನಂತ ಸಣ್ಣವ. ನನ್ನಹಾಂಟ್ಯಾ, ಲಗ್ನ ಮಾಡಿದರೆ ಎಡ್ಡು ಮಕ್ಕಳಾಗತವ.” (ಪೋರ